ಇಲ್ಲೂ ಕೂಡ ನಾವು ಯಾರಿಗೆ ಅರ್ಹತೆ ಇದೆ ಅವರಿಗೆ ಓದಲು ಅವಕಾಶ ಕೊಡುತ್ತೇವೆ. ಅವರಿಗೆ ಅಗತ್ಯ ಬಿದ್ದರೆ ನಾವು ಸಬ್ಸಿಡಿ ಕೊಟ್ಟು ಓದಿಸುತ್ತೇವೆ. ಸ್ಕಾಲರ್‌ಶಿಪ್ ಕೊಡುತ್ತೇವೆ. ಈ ಭರವಸೆಯನ್ನು ರಾಜ್ಯ ಸರ್ಕಾರ ದಯವಿಟ್ಟು ಕೊಡಬೇಕು. ಕರ್ನಾಟಕ ಕೇವಲ ಹಣದಿಂದ ಡಾಕ್ಟರ್‌ಗಳಾಗಿ ಹೃದಯವನ್ನು ಎಲ್ಲೋ ಹುಡುಕಿ ಆಪರೇಷನ್ ಮಾಡುವ ಪರಿಸ್ಥಿತಿ ಬರಬಾರದು ಎಂದು ನಾನು ಮತ್ತೊಮ್ಮೆ ಕೇಳಿಕೊಂಡು, ನನ್ನ ಈ ಕೆಲವು ವಿಚಾರಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಉಪಾಧ್ಯಕ್ಷರು** : ಈಗ ಪ್ರಶ್ನೋತ್ತರ.

## 4. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸುವ ಪ್ರಶ್ನೋತ್ತರಗಳು

**ಕುಮಟಾ ಮತ್ತು ಹೊನ್ನಾವರ ಪಟ್ಟಣಗಳಲ್ಲಿ ರಂಗಮಂದಿರ ನಿರ್ಮಾಣ**

601 (5293) : ಶ್ರೀ ಮೋಹನ್. ಕೆ. ಶೆಟ್ಟಿ (ಕುಮಟ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಮಟಾ ವಿಧಾನ ಸಭಾ ಕ್ಷೇತ್ರವು ಜಾನಪದ, ಯಕ್ಷಗಾನ ಮುಂತಾದ ಕಲೆಯ ಬೇಡಾಗಿದ್ದು ಕುಮಟಾ ಮತ್ತು ಹೊನ್ನಾವರ ಪಟ್ಟಗಳಲ್ಲಿ ಸಾಂಸ್ಕೃತಿಕ ಚಟುವಟಿಕೆ ನಡೆಸಲು ಒಂದೂ ರಂಗ ಮಂದಿರವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ರಂಗಮಂದಿರ ನಿರ್ಮಾಣಕ್ಕಾಗಿ ಏನು ಕ್ರಮ ಕೈಗೊಂಡಿದೆ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಸಚಿವೆಯವರು)

ಅ) ಹೌದು.

ಆ) 1. ಇಲಾಖೆಯಲ್ಲಿ ಬಯಲುರಂಗಮಂದಿರದ ಯೋಜನೆ ಜಾರಿಯಲ್ಲಿದೆ.

2. ಕುಮಟಾ ಪಟ್ಟಣದಲ್ಲಿ ಬಯಲುರಂಗಮಂದಿರ ನಿರ್ಮಿಸಲು 50,000–00 ರೂ.ಗಳನ್ನು 1991 ರಲ್ಲಿ ಬಿಡುಗಡೆ ಮಾಡಿದೆ.

3. ಬಯಲು ರಂಗಮಂದಿರ 1995 ರಲ್ಲಿ ಉದ್ಘಾಟನೆಯಾಗಿದೆ.

4. ಹೊನ್ನಾವರ ಪಟ್ಟಣದಲ್ಲಿ ಬಯಲು ರಂಗಮಂದಿರ ನಿರ್ಮಾಣಕ್ಕೆ ಯಾವುದೇ ಬೇಡಿಕೆ ಬಂದಿಲ್ಲ.

**ಶ್ರೀ ಮೋಹನ್ ಕೆ. ಶೆಟ್ಟಿ** : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವೆಯರು ಉತ್ತರವನ್ನು ಕೊಟ್ಟಿದ್ದಾರೆ. ಇಲಾಖೆಯಲ್ಲಿ ಬಯಲು ರಂಗ ಮಂದಿರದ ಯೋಜನೆ ಜಾರಿಯಲ್ಲಿದೆ. ಹಾಗೂ ಬಯಲು ರಂಗ ಮಂದಿರ ಕುಮಟಾದಲ್ಲಿ ನಿರ್ಮಿಸಲು ಐವತ್ತು ಸಾವಿರ ರೂಪಾಯಿಗಳನ್ನು 1991 ರಲ್ಲಿ ಬಿಡುಗಡೆ ಮಾಡಿದೆ. ಬಯಲು ರಂಗ ಮಂದಿರ 1995 ರಲ್ಲಿ ಉದ್ಘಾಟನೆಯಾಗಿದೆ. ಹೊನ್ನಾವರ ಪಟ್ಟಣದಲ್ಲಿ ಬಯಲು ರಂಗ ಮಂದಿರದ ನಿರ್ಮಾಣಕ್ಕೆ ಯಾವುದೇ ಬೇಡಿಕೆ ಬಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಆದರೆ, ಅವರದ್ದು ಬಯಲು ರಂಗ ಮಂದಿರದ ಯೋಜನೆ ಇರಬಹುದು. ಆದರೆ, ಇದು ಹಳೆಯ ಪದ್ಧತಿಯಾಗಿದೆ. ಏಕೆಂದರೆ, ಬಯಲು ರಂಗ ಮಂದಿರ ಇದ್ದರೆ.. ನಮ್ಮ

ಕ್ಷೇತ್ರದಲ್ಲಿ ಖ್ಯಾತ ಸಾಹಿತಿಗಳು, ಜಾನಪದ ಕಲಾವಿದರು, ಯಕ್ಷಗಾನ ಕಲಾವಿದರು, ನಾಟಕಕಾರರು, ಸಿನಿಮಾ ನಟರು ಬಹಳಷ್ಟು ಜನರಿದ್ದಾರೆ. ತಾವು ನೋಡುತ್ತಿರಬಹುದು, ಶ್ರೀಯುತ ಯಶವಂತ್ ಚಿತ್ತಾಲ್‌ರವರು, ದಿವಂಗತ ಎಸ್.ಆರ್. ಯಕ್ಕುಮಡಿಯವರು, ಶ್ರೀಯುತ ಸಾಂಬಾಧೀಕ್ಷಿತ್‌ರವರು, ಇವರುಗಳು ಪ್ರಸಿದ್ಧ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ವಿಜೇಯಿತರಾಗಿದ್ದಾರೆ. ಹಾಗೆಯೇ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ ವಿಜೇಯಿತರಾದ ಗೌರೀಶ್ ಕಾಯಿದೆ, ಅರವಿಂದನಾಡಕರ್ಣಿಯವರು, ದಿವಂಗತ ವಿ.ಜಿ. ಭಟ್‌ಡಕೋಟ, ಮುಂತಾದವರು ನಮ್ಮಲ್ಲಿದ್ದಾರೆ. ಹಾಗೆಯೇ, ಯಕ್ಷಗಾನದಲ್ಲಿ ಮತ್ತು ಜಾನಪದದಲ್ಲಿ ಡಾ: ಎಲ್.ಆರ್. ಹೆಗಡೆ, ಡಾ: ಎನ್.ಆರ್. ನಾಯಕ್, ಶಿವಪ್ಪ ಗೋವಿಂದ ಗೌಡ, ಶ್ರೀ ಪ್ರಭಾಕರ್ ಬಂಡಾರಿ, ರಾಮಚಂದ್ರಹೆಗಡೆ, ಗೋವಿಂದನಾಯಕ್ ಮುಂತಾದವರು ನಮ್ಮ ಕ್ಷೇತ್ರದಿಂದ ಬಂದವರಾಗಿದ್ದಾರೆ. ಹಾಗೆಯೇ, ನಾಟಕದಲ್ಲೂ ಕೂಡ ಅಕಾಡಮಿ ಪುರಸ್ಕೃತರಾದ ಶ್ರೀಯುತ ಜಿ.ವಿ. ಭಟ್, ಶ್ರೀ ಕಿರಣ್ ಭಟ್, ಇದಲ್ಲದೆ ನಮ್ಮಲ್ಲಿ ಪ್ರಸಿದ್ಧ ಸಿನಿಮಾ ನಟರು ಬಂದಿದ್ದಾರೆ. ದಿವಂಗತ ಪಂಡರಿಬಾಯಿ, ದಿವಂಗತ ಶಂಕರ್ ನಾಗ್ ರವರು ನಮ್ಮ ಕ್ಷೇತ್ರದಿಂದ ಬಂದವರಾಗಿದ್ದಾರೆ. ಹಾಗೆಯೇ ಶ್ರೀಯುತ ಮೈನಾವತಿಯವರು. ಶ್ರೀಯುತ ಅನಂತ್‌ನಾಗ್ ಮುಂತಾದವರು ನಮ್ಮ ಕ್ಷೇತ್ರದಿಂದ ಬಂದಿರುವುದರಿಂದ, ಅವರ ಸ್ಮರಣಾರ್ಥವಾಗಿ ನಮ್ಮ ಭಾರತದ ಭವ್ಯ ಸಂಸ್ಕೃತಿ ಪರಂಪರೆಯ ಉಳಿವಿಗಾಗಿ ಸುಸಜ್ಜಿತವಾದ ವಿಶಾಲವಾದ ರಂಗ ಮಂದಿರ ಬೇಕು. ಬಯಲು ರಂಗ ಮಂದಿರ ಬೇಡ. ಕನಿಷ್ಟ ಕುಮಟ, ಹೊನ್ನಾವರ, ಗೋಕರ್ಣದಲ್ಲಿ ಅವರ ನೆನಪಿಗೋಸ್ಕರ ಆ ಕಲೆಯ ಬೆಳವಣಿಗೆಗೋಸ್ಕರ ರಂಗ ಮಂದಿರವನ್ನು ಮಾಡಬೇಕೆಂದು ನಾನು ಮಾನ್ಯ ಸಚಿವೆಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀಮತಿ ರಾಣಿಸತೀಶ್** : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಅವರ ಕ್ಷೇತ್ರದಲ್ಲಿ ಬಯಲು ರಂಗಮಂದಿರವೊಂದರ ಬೇಡಿಕೆಯನ್ನಿಟ್ಟಿರುತ್ತಾರೆ.

**ಉಪಾಧ್ಯಕ್ಷರು** : ಬಯಲು ರಂಗ ಮಂದಿರವಲ್ಲ, ರಂಗ ಮಂದಿರ.

**ಶ್ರೀಮತಿ ರಾಣಿಸತೀಶ್** : ರಂಗ ಮಂದಿರ ಬೇರೆ. ಬಯಲು ರಂಗ ಮಂದಿರ ಬೇರೆ. ಅವರು ಕೇಳುತ್ತಿರುವುದು ಬಯಲು ರಂಗ ಮಂದಿರವೋ ಅಥವಾ ರಂಗ ಮಂದಿರವೋ ಎಂಬುದು ನನಗೆ ಗೊತ್ತಾಗುತ್ತಿಲ್ಲ.

**ಶ್ರೀ ಮೋಹನ್ ಕೆ. ಶೆಟ್ಟಿ** : ನಾನು ರಂಗ ಮಂದಿರವನ್ನು ಕೇಳುತ್ತಿದ್ದೇನೆ. ಕಲಾವಿದರನ್ನು ಪ್ರೋತ್ಸಾಹಿಸುವ ಸಲುವಾಗಿ ಜಾಗ ಸಿಗುತ್ತಿಲ್ಲ. ಆದ್ದರಿಂದ ರವೀಂದ್ರಕಲಾಕ್ಷೇತ್ರದಂತೆ ಸುಸಜ್ಜಿತವಾದ ಒಂದು ರಂಗ ಮಂದಿರವನ್ನು ಮಾಡುವ ಬಗ್ಗೆ ಯೋಜನೆಯನ್ನು ಜಾರಿಗೆ ತರಬೇಕೆಂದು ಕೇಳುತ್ತಿದ್ದೇನೆ.

**ಶ್ರೀಮತಿ ರಾಣಿಸತೀಶ್** : ರಂಗ ಮಂದಿರದ ಯೋಜನೆಯನ್ನು ಜಿಲ್ಲಾ ಕೇಂದ್ರ ಸ್ಥಾನಕ್ಕೆ ಮಾತ್ರ ಮೀಸಲಾಗಿಟ್ಟಿರುವ ವಿಚಾರವನ್ನು ತಮ್ಮ ಮೂಲಕ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಬಯಲು ರಂಗ ಮಂದಿರ ಬೇಕು ಎಂದರೆ, ಅವರ ಕ್ಷೇತ್ರಕ್ಕೆ ಬೇಕಾಗಿರುವ ಬಯಲು ರಂಗ ಮಂದಿರದ ಬಗ್ಗೆ

ಪ್ರಸ್ತಾವನೆ ಇದ್ದರೆ ಅದನ್ನು ನಾನು ಖಂಡಿತ ಪರಿಶೀಲನೆ ಮಾಡಿ ಅವರ ಕ್ಷೇತ್ರಕ್ಕೆ ಕೊಡಲಿಕ್ಕೆ ಕೆಲಸವನ್ನು ಮಾಡುತ್ತೇನೆ. ಬಯಲು ರಂಗ ಮಂದಿರವನ್ನು ಕೊಡಬೇಕಾದರೆ ಕೆಲವು ನಿಯಮಾವಳಿಗಳನ್ನು ನಾವು ರಚನೆ ಮಾಡಿಕೊಂಡಿದ್ದೇವೆ. ಅದರಲ್ಲಿ ನಿರ್ದೇಶನದ ಲಭ್ಯತೆಯನ್ನು ಆಧರಿಸಿ ಕನಿಷ್ಟ ಮೂರು ಲಕ್ಷ ರೂಪಾಯಿಗಳ ಬಯಲು ರಂಗ ಮಂದಿರದ ನಿರ್ಮಾಣಕ್ಕಾಗಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾಪಂಚಾಯಿತಿ, ಪುರಸಭೆ, ನಗರ ಸಭೆ, ಶಿಕ್ಷಣ ಸಂಸ್ಥೆಗಳು, ಸಂಘಸಂಸ್ಥೆಗಳು, ಸ್ವಂತ ಸಂಪನ್ಮೂಲದಿಂದ ಸೇರಿಸಿ ಎರಡು ಲಕ್ಷ ರೂಪಾಯಿಯನ್ನು ಉದ್ದೇಶಿತ ಬಯಲು ರಂಗ ಮಂದಿರದ ನಿರ್ಮಾಣ ಕಾರ್ಯದ ನೀಲಿ ನಕ್ಷೆ ಮತ್ತು ಅಂದಾಜು ವೆಚ್ಚದ ಪಟ್ಟಿಯನ್ನು ಹಾಗೂ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಲು ಒಪ್ಪಂದ ಪತ್ರ ನೀಡಿದ್ದಲ್ಲಿ ನಾವು ಬಯಲು ರಂಗ ಮಂದಿರಕ್ಕೆ ಒಂದು ಲಕ್ಷ ರೂಪಾಯಿ ಹಣವನ್ನು ಕೊಡುತ್ತೇವೆ ಎಂಬ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಮೋಹನ್ ಕೆ. ಶೆಟ್ಟಿ** : ನಾನು ಬಯಲು ರಂಗ ಮಂದಿರವನ್ನು ಕೇಳುತ್ತಿಲ್ಲ, ನಮ್ಮಲ್ಲಿ ಪ್ರಸಿದ್ಧ ಸಾಹಿತಿಗಳು, ಕಲಾವಿದರು, ಚೊತ್ರಕಲಾವಿದರು, ಯಕ್ಷಗಾನ ಕಲಾವಿದರು, ನಾಟಕಕಾರರುಗಳೆಲ್ಲರೂ ಇರುವುದರಿಂದ, ಅವರು ಕೇವಲ ಜಿಲ್ಲೆಗೆ ಸೀಮಿತ ಮಾಡದೆ ತಾಲ್ಲೂಕು ಮಟ್ಟಕ್ಕೂ ಸೀಮಿತ ಮಾಡಿ ನಮಗೆ ಸುಸಜ್ಜಿತವಾದ ರವೀಂದ್ರಕಲಾಕ್ಷೇತ್ರ ಅಥವಾ ಟೌನ್ ಹಾಲ್ ಎನ್ನುತ್ತಾರಲ್ಲ ಆ ರೀತಿ ಒಂದು ರಂಗ ಮಂದಿರವನ್ನು ಮಾಡಿಸಿಕೊಡಬೇಕು. ಅದನ್ನು ಮಾಡಲು ಅವರ ಇಲಾಖೆಯಲ್ಲಿ ಯೋಜನೆ ಇಲ್ಲವೆಂದಾದಲ್ಲಿ ಅದನ್ನು ಮಾರ್ಪಾಡು ಮಾಡಿಕೊಂಡು ಆ ಯೋಜನೆಯನ್ನು ಜಾರಿಗೆ ತರಬೇಕು. ಮತ್ತು ಆ ಕಾಲವಿದರಿಗೆ ಗೌರವವನ್ನು ಕೊಡಬೇಕೆಂದು ನಾನು ಈ ಸಮಯದಲ್ಲಿ ಅವರಿಗೆ ಆಗ್ರಹಿಸುತ್ತಿದ್ದೇನೆ.

**ಶ್ರೀಮತಿ ರಾಣಿಸತೀಶ್** : ಮಾನ್ಯ ಸದಸ್ಯರ ಬೇಡಿಕೆ ರಂಗ ಮಂದಿರ ಮಾಡಿಕೊಡುವ ಬಗ್ಗೆ ಆಗಿದೆ. ನಾನು ಇದು ಜಿಲ್ಲಾ ಕೇಂದ್ರ ಸ್ಥಾನಕ್ಕೆ ಮಾತ್ರ ಮೀಸಲಾಗಿದೆ ಎಂಬ ಮಾತನ್ನು ನಾನು ಆಗಲೇ ಹೇಳಿದೆ. ಅವರು ಹೇಳಿರತಕ್ಕ ಸಾಂಸ್ಕೃತಿಕ ಚಟುವಟಿಕೆಗಳನ್ನು, ಕಾರ್ಯಕ್ರಮಗಳನ್ನು ನಾವು ವಿಸ್ತಾರ ಮಾಡಬೇಕಾದರೆ ಅದನ್ನು ಗಮನದಲ್ಲಿಟ್ಟುಕೊಂಡಿರುತ್ತೇವೆ. ಆದರೆ ಇಡೀ ಕರ್ನಾಟಕದಲ್ಲಿ ಇನ್ನೂ ಐದು ಜಿಲ್ಲೆ ಕ್ಷೇತ್ರಕ್ಕೆ ರಂಗ ಮಂದಿರ ಬಂದಿಲ್ಲದಿರುವ ಪರಿಸ್ಥಿತಿಯಲ್ಲಿ ಹೆಚ್ಚು ಆದ್ಯತೆಯನ್ನು ಈ ಐದು ಜಿಲ್ಲಾ ಕ್ಷೇತ್ರಕ್ಕೆ ಕೊಟ್ಟು ನಂತರ ಬೇಡಿಕೆಗಳಿದ್ದರೆ ಅದನ್ನು ಪರಿಗಣಿಸಿ ಅವರ ಪ್ರಸ್ತಾವನೆಯನ್ನು ನಾವು ಪರಿಶೀಲನೆ ಮಾಡುತ್ತೇವೆ.

**ಶ್ರೀ ಮೋಹನ್ ಕೆ. ಶೆಟ್ಟಿ** : ಮಾನ್ಯ ಉಪಾಧ್ಯಕ್ಷರೇ, ನಾನು ಕೊನೆಯದಾಗಿ ಮತ್ತೊಂದು ಸಾರಿ ಮಾನ್ಯ ಸಚಿವರಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರು ನಿಯಮಗಳನ್ನು ಮಾರ್ಪಡಿಸಿ, ನಮ್ಮಲ್ಲಿ ಪ್ರಸಿದ್ಧ ಕಲಾಕಾರರು ಇತ್ಯಾದಿಯವರೆಲ್ಲರೂ ಇರುವುದರಿಂದ ಕುಮಟಾಕ್ಕೊಂದು, ಗೋಕರ್ಣಕ್ಕೊಂದು ಮತ್ತು ಹೊನ್ನಾವರಕ್ಕೊಂದು ರಂಗ ಮಂದಿರ ನಿರ್ಮಾಣ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಆಗ್ರಹಿಸುತ್ತೇನೆ.

**ಶ್ರೀಮತಿ ರಾಣಿ ಸತೀಶ್** : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಸ್ತಾವನೆಯನ್ನು ನಾವು ಖಂಡಿತವಾಗಿ ಗಮನದಲ್ಲಿಟ್ಟುಕೊಂಡಿದ್ದು, ಸೂಕ್ತ ಸಂದರ್ಭ ಬಂದಾಗ ಅದಕ್ಕೆ ನಾವು ಸ್ಪಂದಿಸುತ್ತೇವೆ.

**ಶ್ರೀ ಲಮಾಣಿ ರುದ್ರಪ್ಪ ಮಾನಪ್ಪ** : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಯವರು ಎಲ್ಲಾ ರೀತಿಯಿಂದ 2 ಲಕ್ಷ ರೂಪಾಯಿಗಳನ್ನು ನಾವು ಕೂಡಿಸಿದರೆ ಸರ್ಕಾರ 1 ಲಕ್ಷ ರೂಪಾಯಿಗಳನ್ನು ಕೊಡುತ್ತದೆ ಎಂದು ಹೇಳಿದರು. 1 ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಪಡೆಯಲು ಜಿಲ್ಲಾ ಪಂಚಾಯಿತಿಯವರು, ಶಾಸಕರು, ಎಂ.ಪಿ.ಗಳು ಎಲ್ಲರೂ ಕೂಡಿಸಿ ಇಷ್ಟೆಲ್ಲಾ ಹಣವನ್ನು ಕೊಡುವುದಾದರೆ, ಸುಮ್ಮನೆ 1 ಲಕ್ಷ ರೂಪಾಯಿಗಳಲ್ಲಿ ಇವತ್ತು ಯಾವುದೇ ಬಯಲು ರಂಗ ಮಂದಿರನವನ್ನೂ ಕೂಡ ಕಟ್ಟಲಿಕ್ಕಾಗುವುದಿಲ್ಲ. ಆದುದರಿಂದ ಇದನ್ನು 5 ಲಕ್ಷ ರೂಪಾಯಿಗಳವರೆಗೆ ಏರಿಸಿದರೆ, ನಾವು ನಿಶ್ಚಿತವಾದಂತಹ ಒಂದು ಒಳ್ಳೆಯ ರಂಗ ಮಂದಿರವನ್ನು ಕಟ್ಟಬಹುದು. ಅದಕ್ಕೆ ಈ ಪ್ರಸ್ತಾವನೆಯನ್ನು 5 ಲಕ್ಷ ರುಪಾಯಿಗಳಿಗೆ ಏರಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀಮತಿ ರಾಣಿ ಸತೀಶ್** : ಮಾನ್ಯ ಉಪಾಧ್ಯಕ್ಷರೇ, ಈ ಬಯಲು ರಂಗ ಮಂದಿರದ ಪ್ರಸ್ತಾವನೆಗಳು ಬಹಳಷ್ಟು ಹೆಚ್ಚು ಬೇಡಿಕೆಯಲ್ಲಿವೆ. ಅಲ್ಲಿಯ ಶಾಸಕರು ಮತ್ತು ಸ್ಥಳಿಯರು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ಕೊಡತಕ್ಕಂಥ ನಿಟ್ಟಿನಲ್ಲಿ ನಾವು ಹಣವನ್ನು ಹೆಚ್ಚು ಮಾಡತಕ್ಕಂಥ ಒಂದು ಚಿಂತನೆ ಸರ್ಕಾರದಲ್ಲಿದೆ. ಮಾನ್ಯ ಶಾಸಕರು ಈಗೇನು ಪ್ರಸ್ತಾವನೆಯನ್ನು ಮಾಡಿದರೋ, ಅಷ್ಟು ನಾವು ಮಾಡಲಿಕ್ಕೆ ಸಾಧ್ಯವಿಲ್ಲದಿದ್ದರೂ, ಕೊಂಚ ಮಟ್ಟಿಗೆ ಹಣವನ್ನು ಹೆಚ್ಚು ಮಾಡತಕ್ಕಂಥ ಮತ್ತು ಅದಕ್ಕೆ ಹೆಚ್ಚು ಆದ್ಯತೆಯನ್ನು ಕೊಡತಕ್ಕಂಥ ವಿಚಾರವನ್ನು ನಾವು ಪರಿಶೀಲನೆ ಮಾಡುತ್ತೇವೆ.

**ಉಪಾಧ್ಯಕ್ಷರು** : ಮಾನ್ಯ ಹೆಚ್.ಸಿ. ಬಸವರಾಜ್‌ರವರು ಮತ್ತು ಮಾನ್ಯ ಎ.ನಾರಾಯಣ ಸ್ವಾಮಿಯವರು ಕೇಳಿದಂತಹ ಪ್ರಶ್ನೆ ಎರಡೂ ಒಂದೇ ಆಗಿರುವುದರಿಂದ, ಇವೆರಡೂ ಪ್ರಶ್ನೆಗಳನ್ನು ಒಂದೇ ಸಾರಿ ಕ್ಲಬ್ ಮಾಡಿ ತೆಗೆದುಕೊಳ್ಳಬಹುದು. ಮಾನ್ಯ ನಾರಾಯಣ ಸ್ವಾಮಿಯವರು ಸದನದಲ್ಲಿ ಇಲ್ಲ. ಮಾನ್ಯ ಬಸವರಾಜ್‌ರವರೇ, ತಾವೇ ಈ ಪ್ರಶ್ನೆಯನ್ನು ಕೇಳಿಬಿಡಿ.

**ರಾಜ್ಯದಲ್ಲಿ ಸ್ವಜಲಧಾರ ಕುಡಿಯುವ ನೀರಿನ ಯೋಜನೆ**

602 (5133) : ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) : ಮಾನ್ಯ ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಎಷ್ಟು ಜೆಲ್ಲೆಗಳಲ್ಲಿ ಸ್ವಜಲಧಾರ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ; (ಜಿಲ್ಲಾವಾರು/ತಾಲ್ಲೂಕುವಾರು ಮಾಹಿತಿ ನೀಡುವುದು);

ಆ) ಯೋಜನೆಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು; (ಜಿಲ್ಲಾವಾರು/ ತಾಲ್ಲೂಕುವಾರು ಮಾಹಿತಿ ನೀಡುವುದು);